# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 197 |
| ಸದಸ್ಯರ ಹೆಸರು | : | ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 14.02.2023 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಿಂದ ಹಾವೇರಿ, ಹುಬ್ಬಳ್ಳಿ-ಧಾರವಾಡ, ಗದಗ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸ್ಥಿರ ಬಂಡವಾಳ ಮತ್ತು ಇನ್ನಿತರೆ ಸಹಾಯಧನ ಯೋಜನೆಗಳಲ್ಲಿ ಎಷ್ಟು ಕೈಗಾರಿಕೆಗಳಿಗೆ ಎಷ್ಟು ಸಹಾಯಧನವನ್ನು ವಿತರಿಸಲಾಗಿದೆ; (ವಿವರ ನೀಡುವುದು) | ಕಳೆದ 3 ವರ್ಷಗಳಿಂದ ಹಾವೇರಿ, ಹುಬ್ಬಳ್ಳಿ-ಧಾರವಾಡ, ಗದಗ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸ್ಥಿರ ಬಂಡವಾಳ ಮತ್ತು ಇನ್ನಿತರೆ ಸಹಾಯಧನ ಯೋಜನೆಗಳಡಿಯಲ್ಲಿ ನೀಡಲಾಗಿರುವ ಸಹಾಯಧನದ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಆ) | ಈ ಜಿಲ್ಲೆಗಳಲ್ಲಿ ನಿರುದ್ಯೋಗಿ ವಿದ್ಯಾವಂತರಿಗೆ ಸ್ವಯಂ-ಉದ್ಯೋಗಕ್ಕಾಗಿ ಸರ್ಕಾರ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ; | ಈ ಜಿಲ್ಲೆಗಳನ್ನು ಒಳಗೊಂಡು ರಾಜ್ಯದಾದ್ಯಂತ ರಾಜ್ಯ ಸರ್ಕಾರವು ನಿರುದ್ಯೋಗ ವಿದ್ಯಾವಂತರಿಗೆ ಸ್ವಯಂ ಉದ್ಯೋಗಕ್ಕಾಗಿ ಈ ಕೆಳಗಿನ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ ಮತ್ತು ಪ್ರೋತ್ಸಾಹಗಳನ್ನು ನೀಡುತ್ತಿದೆ.<br><br>1. **ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ** ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಉತ್ಪಾದನಾ ಘಟಕಗಳಿಗೆ ಗರಿಷ್ಠ ಸಾಲ ರೂ.50 ಲಕ್ಷಗಳವರೆಗೆ ಸೇವಾ ಘಟಕಗಳಿಗೆ ರೂ.20 ಲಕ್ಷಗಳವರೆಗೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಿ ಸಣ್ಣ ಉದ್ಯಮಗಳನ್ನು ಸ್ಥಾಪಿಸಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲ ಒದಗಿಸಲಾಗುವುದು ಹಾಗೂ ಯೋಜನಾ ವೆಚ್ಚದ ಮೇಲೆ ಶೇ.15 ರಿಂದ ಶೇ.35 ರವರೆಗೆ ಗರಿಷ್ಠ ರೂ.7.50 ಲಕ್ಷದಿಂದ ರೂ.17.50 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತಿದೆ.<br><br>2. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಸೂಕ್ಷ್ಮ, ಮತ್ತು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ರೂ.5.00 ಕೋಟಿಗಳವರೆಗೆ ಸಾಲ ಪಡೆದು ನಿಗದಿತ ಸಮಯದಲ್ಲಿ ಮರು ಪಾವತಿ ಮಾಡಿದ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕಾ ಘಟಕಗಳಿಗೆ 5 ವರ್ಷಗಳ ಅವಧಿಗೆ ಶೇಕಡ 6 ರಂತೆ ಬಡ್ಡಿ ಸಹಾಯಧನ ನೀಡಲಾಗುವುದು.<br><br>3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಶೇ.75 ರಷ್ಟು ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನಗಳನ್ನು ಕೈಗಾರಿಕಾ ಶೆಡ್‌ಗಳನ್ನು ನೀಡಲಾಗುತ್ತಿದೆ. ನಿವೇಶನದ ಗರಿಷ್ಠ ವಿಸ್ತೀರ್ಣ 2 ಎಕರೆಗಳು. |

| | | |
|---|---|---|
| | | 4. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಬ್ಯಾಂಕಿನಿಂದ ಸಾಲ ಒದಗಿಸಿ ಯೋಜನಾ ವೆಚ್ಚದ ಮೇಲೆ ಶೇ. 60 ರಷ್ಟು ಗರಿಷ್ಟ ರೂ.5.00 ಲಕ್ಷ ಸಹಾಯಧನ ನೀಡಲಾಗುತ್ತಿದೆ.<br>5. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೊದಲ ಪೀಳಿಗೆಯ ಉದ್ಯಮಿದಾರರು ಬ್ಯಾಂಕ್ / ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸ್ಥಾಪಿಸುವ ಹೊಸ ಘಟಕಗಳಿಗೆ ಗರಿಷ್ಟ ರೂ.10.00 ಕೋಟಿ ಯೋಜನಾ ವೆಚ್ಚದಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್ / ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ) ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50ರಷ್ಟು ಬಡ್ಡಿ ರಹಿತ ಗರಿಷ್ಟ ರೂ.75 ಲಕ್ಷ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುತ್ತಿದೆ.<br>6. ಕರ್ನಾಟಕ ರಾಜ್ಯ ಕೈಗಾರಿಕಾ ನೀತಿ 2020-25 ರಂತೆ ಕೆಳಕಾಣಿಸಿದ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಅರ್ಹ ಕೈಗಾರಿಕೆಗಳಿಗೆ ನೀಡಿ ಉತ್ತೇಜಿಸಲಾಗುತ್ತಿದೆ.<br>1. ಮುದ್ರಾಂಕ ಶುಲ್ಕ ವಿನಾಯಿತಿ<br>2. ನೋಂದಣಿ ಶುಲ್ಕ ರಿಯಾಯಿತಿ<br>3. ಬಂಡವಾಳ ಹೂಡಿಕೆ ಸಹಾಯಧನ<br>4. ಕಿರು ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಹಾಯಧನ<br>5. ಭೂಪರಿವರ್ತನಾ ಶುಲ್ಕ ಮರುಪಾವತಿ<br>6. ರಫ್ತು ಆಧಾರಿತ ಘಟಕಗಳಿಗೆ ರಿಯಾಯಿತಿ<br>7. ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ<br>8. ವಿದ್ಯುತ್ ತೆರಿಗೆ ವಿನಾಯಿತಿ<br>9. ತಾಂತ್ರಿಕ ಉನ್ನತೀಕರಣ, ಗುಣಮಟ್ಟ ಪ್ರಮಾಣ ಪತ್ರ ಸಹಾಯಧನ<br>10. ಮಳೆನೀರು ಕೊಯ್ಲು / ಸಂರಕ್ಷಣೆ ಸಹಾಯಧನ<br>11. ತಂತ್ರಜ್ಞಾನ ಉನ್ನತೀಕರಣಕ್ಕೆ ಬಡ್ಡಿ ಸಹಾಯಧನ |
| ಇ) | ಸ್ಥಳೀಯ ಸಂಪನ್ಮೂಲಗಳ ಆಧಾರದ ಮೇಲೆ ಸ್ವ-ಉದ್ಯೋಗ ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸ್ಥಳೀಯ ಸಂಪನ್ಮೂಲಗಳ ಆಧಾರದ ಮೇಲೆ ರಾಜ್ಯ ಸರ್ಕಾರವು ನಿರುದ್ಯೋಗಿ ವಿದ್ಯಾವಂತರಿಗೆ ಸ್ವಯಂ ಉದ್ಯೋಗಕ್ಕಾಗಿ ಕೈಗೊಂಡಿರುವ ಯೋಜನೆಗಳನ್ನು ಮೇಲಿನ ಉಪ ಪ್ರಶ್ನೆ (ಆ) ರಲ್ಲಿ ಒದಗಿಸಲಾಗಿದೆ. |

ಸಿಐ 33 ಸಿಎಸ್ ಸಿ 2023

N. Nagaraju

**(ಎನ್. ನಾಗರಾಜು (ಎಂ.ಟಿ.ಬಿ.))**

ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ

ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು.

ಅನುಬಂಧ-1

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಲೀಂ ಅಹಮದ್ ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 197ಕ್ಕೆ ಅನುಬಂಧ

### ಕಳೆದ 3 ವರ್ಷಗಳಿಂದ ಹಾವೇರಿ, ಧಾರವಾಡ, ಗದಗ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸ್ಥಿರ ಬಂಡವಾಳ ಮತ್ತು ಇನ್ನಿತರೆ ಸಹಾಯಧನ ಯೋಜನೆಗಳಡಿಯಲ್ಲಿ ನೀಡಲಾಗಿರುವ ಸಹಾಯಧನದ ವಿವರಗಳು

| # | | 2019-20 | | 2020-21 | | 2021-22 | |
|---|---|---|---|---|---|---|---|
| | | ಭೌತಿಕ | ಆರ್ಥಿಕ (ರೂ ಲಕ್ಷಗಳಲ್ಲಿ) | ಭೌತಿಕ | ಆರ್ಥಿಕ (ರೂ ಲಕ್ಷಗಳಲ್ಲಿ) | ಭೌತಿಕ | ಆರ್ಥಿಕ (ರೂ ಲಕ್ಷಗಳಲ್ಲಿ) |
| | **ಗದಗ ಜಿಲ್ಲೆ** | | | | | | |
| 1 | ಕೃಷಿ ನೀತಿಯಡಿ-ಸಹಾಯಧನ | | | 1 | 56.21 | 3 | 126.24 |
| 2 | ಕೆ.ಎಸ್.ಎಫ್.ಸಿ-ಬಡ್ಡಿ ಸಹಾಯಧನ | 9 | 739.40 | 3 | 218.00 | 3 | 496.50 |
| 3 | ಕೈಗಾರಿಕಾ ನೀತಿಗಳಡಿ-ಸಹಾಯಧನ | 17 | 176.72 | 16 | 87.61 | 16 | 205.74 |
| 4 | ಗಿರಿಜನ ಉಪಯೋಜನೆ: 60:40 ಸಹಾಯಧನ | - | - | - | - | 3 | 11.00 |
| 5 | ಗಿರಿಜನ ಉಪಯೋಜನೆ-ಸಾಫ್ಟ್ ಸೀಡ್ ಕ್ಯಾಪಿಟಲ್ | - | - | - | - | - | - |
| 6 | ಪ್ರಧಾನಮಂತ್ರಿ ಉದ್ಯೋಗ ಸೃಜನೆ ಯೋಜನೆ | 74 | 170.74 | 77 | 155.16 | 109 | 255.17 |
| 7 | ಮುಖ್ಯಮಂತ್ರಿ ಸ್ವಯಂ ಉದ್ಯೋಗ ಸೃಜನೆ ಯೋಜನೆ | 7 | 5.22 | 41 | 33.83 | - | - |
| 8 | ವಿಶೇಷ ಘಟಕ ಯೋಜನೆ: 60:40 ಸಹಾಯಧನ | - | - | - | - | 5 | 11.01 |
| 9 | ವಿಶೇಷ ಘಟಕ ಯೋಜನೆ:ಸಾಫ್ಟ್ ಸೀಡ್ ಕ್ಯಾಪಿಟಲ್ | 1 | 4.25 | 1 | 10.00 | 1 | 24.75 |
| | **ಒಟ್ಟು** | **108** | **1,096.33** | **139** | **560.81** | **140** | **1,130.42** |
| | **ಧಾರವಾಡ ಜಿಲ್ಲೆ** | | | | | | |
| 1 | ಕೃಷಿ ನೀತಿಯಡಿ-ಸಹಾಯಧನ | | | 19 | 659.21 | 7 | 251.43 |
| 2 | ಕೆ.ಎಸ್.ಎಫ್.ಸಿ-ಬಡ್ಡಿ ಸಹಾಯಧನ | 94 | 853.48 | 61 | 481.96 | 110 | 803.81 |
| 3 | ಕೈಗಾರಿಕಾ ನೀತಿಗಳಡಿ-ಸಹಾಯಧನ | 24 | 1,477.00 | 7 | 586.70 | 14 | 1,500.00 |
| 4 | ಗಿರಿಜನ ಉಪಯೋಜನೆ: 60:40 ಸಹಾಯಧನ | 4 | 9.00 | 1 | 1.36 | - | - |
| 5 | ಗಿರಿಜನ ಉಪಯೋಜನೆ- ಸಾಫ್ಟ್ ಸೀಡ್ ಕ್ಯಾಪಿಟಲ್ | 1 | 50.00 | 1 | 5.50 | 2 | 23.00 |
| 6 | ಪ್ರಧಾನಮಂತ್ರಿ ಉದ್ಯೋಗ ಸೃಜನೆ ಯೋಜನೆ | 87 | 136.64 | 136 | 226.91 | 157 | 288.70 |
| 7 | ಮುಖ್ಯಮಂತ್ರಿ ಸ್ವಯಂ ಉದ್ಯೋಗ ಸೃಜನೆ ಯೋಜನೆ | 29 | 39.14 | 34 | 36.76 | 15 | 21.46 |

| | | | | | | | |
|---|---|---|---|---|---|---|---|
| 8 | ವಿಶೇಷ ಘಟಕ ಯೋಜನೆ: 60:40 ಸಹಾಯಧನ | 18 | 54.84 | 4 | 8.68 | 6 | 28.96 |
| 9 | ವಿಶೇಷ ಘಟಕ ಯೋಜನೆ: ಸಾಫ್ಟ್ ಸೀಡ್ ಕ್ಯಾಪಿಟಲ್ | 4 | 90.00 | 2 | 17.50 | 7 | 106.82 |
| | **ಒಟ್ಟು** | **261** | **2,710.11** | **265** | **2,024.59** | **318** | **3,024.17** |
| | **ಹಾವೇರಿ ಜಿಲ್ಲೆ** | | | | | | |
| 1 | ಕೃಷಿ ನೀತಿಯಡಿ-ಸಹಾಯಧನ | | | 1 | 11.20 | | - |
| 2 | ಕೆ.ಎಸ್.ಎಫ್.ಸಿ-ಬಡ್ಡಿಸಹಾಯಧನ | 5 | 138.00 | 6 | 249.40 | 3 | 272.00 |
| 3 | ಕೈಗಾರಿಕಾ ನೀತಿಗಳಡಿ-ಸಹಾಯಧನ | 11 | 70.01 | 4 | 13.84 | 22 | 169.41 |
| 4 | ಗಿರಿಜನ ಉಪಯೋಜನೆ: 60:40 ಸಹಾಯಧನ | 2 | 6.00 | 1 | 3.51 | 1 | 1.49 |
| 5 | ಗಿರಿಜನ ಉಪಯೋಜನೆ- ಸಾಫ್ಟ್ ಸೀಡ್ ಕ್ಯಾಪಿಟಲ್ | - | - | - | - | - | - |
| 6 | ಪ್ರಧಾನಮಂತ್ರಿ ಉದ್ಯೋಗ ಸೃಜನೆ ಯೋಜನೆ | 115 | 239.48 | 202 | 411.86 | 257 | 536.17 |
| 7 | ಮುಖ್ಯಮಂತ್ರಿ ಸ್ವಯಂ ಉದ್ಯೋಗ ಸೃಜನೆ ಯೋಜನೆ | 26 | 39.09 | 49 | 64.06 | 1 | 1.75 |
| 8 | ವಿಶೇಷ ಘಟಕ ಯೋಜನೆ: 60:40 ಸಹಾಯಧನ | - | - | 1 | 3.00 | 3 | 11.00 |
| 9 | ವಿಶೇಷ ಘಟಕ ಯೋಜನೆ: ಸಾಫ್ಟ್ ಸೀಡ್ ಕ್ಯಾಪಿಟಲ್ | - | - | - | - | - | - |
| | **ಒಟ್ಟು** | **159** | **492.58** | **264** | **756.87** | **287** | **991.82** |